ಕರ್ನಾಟಕ ಸರ್ಕಾರ

# ಜನಪರ, ಅಭಿವೃದ್ಧಿಪರ ಆಡಳಿತವೇ ಗೆಲುವಿಗೆ ಕಾರಣ – ಮುಖ್ಯಮಂತ್ರಿ

ಏಪ್ರಿಲ್ 13, 2017

**ಬೆಂಗಳೂರು:** ಉಪಚುನಾವಣೆಗಳಲ್ಲಿನ ಪಕ್ಷದ ಯಶಸ್ಸಿಗೆ ಎಲ್ಲ ಜಾತಿ, ಧರ್ಮದವರೂ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ ಮತ ನೀಡಿದ್ದೇ ಕಾರಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಭಿಪ್ರಾಯಪಟ್ಟಿದ್ದಾರೆ.

ಉಪಚುನಾವಣೆಗಳ ಜಯಭೇರಿಯಯ ನಂತರ ಗೃಹ ಕಚೇರಿ ಕೃಷ್ಣಾದಲ್ಲಿ ಗುರುವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು ನಂಜನಗೂಡು ಮತ್ತು ಗುಂಡ್ಲುಪೇಟೆ ವಿಧಾನಸಭಾ ಉಪಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಬೆಂಬಲಿಸಿದ ಎರಡೂ ಕ್ಷೇತ್ರಗಳ ಮತದಾರರಿಗೆ ಕೃತಜ್ಞತೆ ಅರ್ಪಿಸಿದರು. ಇದೇ ವೇಳೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಸೋನಿಯಾ ಗಾಂಧಿ, ಉಪಾಧ್ಯಕ್ಷರಾದ ರಾಹುಲ್ ಗಾಂಧಿಯವರಿಗೆ ಅಭಿನಂದನೆಗಳನ್ನು ಸಲ್ಲಿಸಿ ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ನೀಡಿದ ಸಹಕಾರವನ್ನು ನೆನೆದರು. ಗೆಲುವಿಗಾಗಿ ಸಹಕರಿಸಿ, ಶ್ರಮಿಸಿದ ಪಕ್ಷದ ಹಿರಿಯ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ರಾಜ್ಯಾಧ್ಯಕ್ಷರಾದ ಜಿ.ಪರಮೇಶ್ವರ್, ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಹಾಗೂ ಸಂಪುಟದ ಎಲ್ಲ ಸಹೋದ್ಯೋಗಿಗಳ ಸಹಕಾರಕ್ಕೆ ಅಭಿನಂದನೆಗಳನ್ನು ತಿಳಿಸಿ ಫಲಿತಾಂಶದ ಕುರಿತಾದ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಪಕ್ಷದ ಸಿದ್ಧಾಂತ, ಕಳೆದ ನಾಲ್ಕು ವರ್ಷದ ಅವಧಿಯಲ್ಲಿ ಕೈಗೊಂಡ ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿ ಕಾರ್ಯಗಳನ್ನು ಪ್ರಸ್ತಾಪಿಸಿ ನಾವು ಮತಯಾಚನೆ ಮಾಡಿದೆವು. ಐದು ಬಜೆಟ್‌ಗಳ ಮೂಲಕ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ ಆಶ್ವಾಸನೆಗಳನ್ನು ಈಡೇರಿಸಿರುವುದನ್ನು ಪ್ರಸ್ತಾಪಿಸಿದೆವು. ನಾವು ಮಾಡಿರುವ ಕೆಲಸಕ್ಕೆ ಕೂಲಿ ಕೊಡಿ ಎಂದು

ಮತದಾರರನ್ನು ಕೇಳಿಕೊಂಡೆವು. ಎಲ್ಲಿಯೂ ವೈಯಕ್ತಿಕ ಟೀಕೆಗೆ ಮುಂದಾಗಲಿಲ್ಲ, ನಿಕೃಷ್ಟ ಭಾಷೆಯನ್ನು ಬಳಸಲು ಹೋಗಲಿಲ್ಲ. ಸರ್ಕಾರದ ಸಾಧನೆಗಳನ್ನಷ್ಟೇ ಪ್ರಮುಖವಾಗಿ ಪ್ರಸ್ತಾಪಿಸಿದೆವು. ಜನ ನಮ್ಮನ್ನು ಆಶೀರ್ವದಿಸಿ ಎರಡೂ ಕ್ಷೇತ್ರಗಳಲ್ಲಿ 10 ಸಾವಿರಕ್ಕೂ ಅಧಿಕ ಮತಗಳಿಂದ ಗೆಲ್ಲಿಸಿದ್ದಾರೆ. ಇದು ಜನರ ನಾಡಿಮಿಡಿತವನ್ನು ಅರಿಯುವಲ್ಲಿ ನಮಗೆ ಸಹಾಯಕವಾಗಿದೆ. ಕೆಲವರು ಸಿದ್ದರಾಮಯ್ಯ ವಿರುದ್ಧ ಆಡಳಿತ ವಿರೋಧಿ ಅಲೆ ಏಳಬಹುದು ಎಂದುಕೊಂಡಿದ್ದರು. ಅದರೆ ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿಪರವಾದ ಆಡಳಿತದಿಂದಾಗಿ ಜನಪರ ಅಲೆ ಮೂಡಿದೆ. ಚುನಾವಣಾ ಫಲಿತಾಂಶವು ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿದ್ದು, 2018ರ ಚುನಾವಣೆಯನ್ನು ಗೆದ್ದೇಗೆಲ್ಲುತ್ತೇವೆ ಎನ್ನುವ ಭರವಸೆಯನ್ನು ಇಮ್ಮಡಿಗೊಳಿಸಿದೆ ಎಂದರು.

ಇದಕ್ಕೂ ಮುನ್ನ ಅವರು, ಉಪಚುನಾವಣೆಗಳು ಮುಂದಿನ ವಿಧಾನಸಭಾ ಚುನಾವಣೆಗಳಿಗೆ ದಿಕ್ಸೂಚಿಯಲ್ಲ. ಇದನ್ನು ಈ ಹಿಂದೆಯೂ ಹೇಳಿದ್ದೇನೆ, ಈಗಲೂ ನನ್ನದು ಅದೇ ಅಭಿಪ್ರಾಯ. ಆದರೆ, ಆ ವಿಚಾರವನ್ನು ಬಿಜೆಪಿಯವರು ಅದರಲ್ಲಿಯೂ ಬಿಜೆಪಿಯ ರಾಜ್ಯಾಧ್ಯಕ್ಷರಾದ ಬಿ.ಎಸ್.ಯಡಿಯೂರಪ್ಪನವರು ವಿಶೇಷವಾಗಿ ಹೇಳುತ್ತಿದ್ದರು. ಇದು 2018ರ ವಿಧಾನಸಭಾ ಚುನಾವಣೆಗಳಿಗೆ ದಿಕ್ಸೂಚಿ ಎಂದು ಹೇಳುತ್ತಿದ್ದರು. ಮುಂದಿನ ಮುಖ್ಯಮಂತ್ರಿ ನಾನೇ ಆಗುತ್ತೇನೆ ನನಗೆ ಮುಖ್ಯಮಂತ್ರಿಯಾಗಲು ಮತ ಕೊಡಿ ಎಂದು ಕೇಳುತ್ತಿದ್ದರು. ಚುನಾವಣೆ ವೇಳೆ ಬಿಜೆಪಿಯವರು ಯಾವುದೇ ವಿಷಯಾಧಾರಿತ ಚರ್ಚೆಗಳನ್ನು ಮಾಡಲಿಲ್ಲ. ಪಕ್ಷದ ಸಾಧನೆ, ಸಿದ್ಧಾಂತಗಳನ್ನು ಹೇಳಲಿಲ್ಲ. ಬದಲಿಗೆ ವೈಯಕ್ತಿಕ ಟೀಕೆ, ಅಸಾಂವಿಧಾನಿಕ ಭಾಷಾ ಪ್ರಯೋಗಕ್ಕೆ ಸೀಮಿತರಾದರು. ಒಣಜಂಭದ ಮಾತುಗಳನ್ನಾಡಿದರು. ಜನತೆ ಇದನ್ನು ತಿರಸ್ಕರಿಸಿದರು ಎಂದರು.

ಯಡಿಯೂರಪ್ಪನವರು, 'ಸಿದ್ದರಾಮಯ್ಯ ಒಬ್ಬ ಅಯೋಗ್ಯ ಮುಖ್ಯಮಂತ್ರಿ' ಎಂದು ಏಕವಚನದಲ್ಲಿ ಮಾತನಾಡಿದರು, ಅದೇ ರೀತಿ ಶ್ರೀನಿವಾಸ ಪ್ರಸಾದ್ ಸಹ ಅತ್ಯಂತ ಕೆಳಮಟ್ಟದ

ಭಾಷಾಪ್ರಯೋಗ ನಡೆಸಿದರು. ಗುಂಡ್ಲುಪೇಟೆಯ ನಮ್ಮ ಪಕ್ಷದ ಅಭ್ಯರ್ಥಿ ಓರ್ವ ಮಹಿಳೆ ಎನ್ನುವುದನ್ನೂ ಮರೆತು ಕೀಳುಮಟ್ಟದ ಮಾತುಗಳನ್ನು ಆಡಿದರು. ಸಂಸ್ಕೃತಿಯ ಬಗ್ಗೆ ಮಾತನಾಡುವ ಈ ಮಂದಿ ಸ್ತ್ರೀಯರಿಗೆ ಗೌರವ ಕೊಡುವ ಕನಿಷ್ಠ ಸಂಸ್ಕೃತಿಯನ್ನೂ ರೂಢಿಸಿಕೊಂಡಿಲ್ಲ. ಯಡಿಯೂರಪ್ಪ, ಪ್ರತಾಪ ಸಿಂಹ ಇಬ್ಬರಿಗೂ ಸಂಯಮವಾಗಲಿ, ನಾಲಗೆ ಮೇಲೆ ಹಿಡಿತವಾಗಲಿ ಇಲ್ಲ ಎಂದು ಬೇಸರಿಸಿದರು. ಇದೇ ವೇಳೆ ಶ್ರೀನಿವಾಸ ಪ್ರಸಾದ್ ಅವರು ತಮ್ಮ ವಿರುದ್ಧ ವೈಯಕ್ತಿಕ ಟೀಕೆ ಮಾಡಿದರೂ ತಾವು ಇಡೀ ಚುನಾವಣೆಯಲ್ಲಿ ಅವರ ಹೆಸರನ್ನೂ ಪ್ರಸ್ತಾಪಿಸುವ ಗೋಜಿಗೆ ಹೋಗಲಿಲ್ಲ ಎಂದರು.

ಕರ್ನಾಟಕ ಸಾಮರಸ್ಯದ ನಾಡು. ಬಸವಣ್ಣನವರು, ಶರಣರು, ಸೂಫಿಸಂತರು ತತ್ವಾದರ್ಶಗಳನ್ನು ಬಿತ್ತಿದ ನಾಡು. ಇಲ್ಲಿ ಮತೀಯತೆ, ಕೋಮುವಾದಗಳ ಮೂಲಕ ಜಾತಿ, ಧರ್ಮಗಳನ್ನು ಎತ್ತಿಕಟ್ಟುವುದನ್ನು ಜನ ಸ್ವೀಕರಿಸುವುದಿಲ್ಲ. ಜಾತಿ, ಧರ್ಮದ ಹೆಸರಿನಲ್ಲಿ ಮತ ಕೇಳುವುದು ಇಲ್ಲಿ ನಡೆಯುವುದಿಲ್ಲ. ಬಿಜೆಪಿಯ ಅಂತಹ ಪ್ರಯತ್ನಗಳಿಗೆ ಎರಡೂ ಕ್ಷೇತ್ರದ ಮತದಾರರು ಪಾಠ ಕಲಿಸಿದ್ದಾರೆ. ಕುವೆಂಪು ಅವರು ಹೇಳಿರುವಂತೆ ಕರ್ನಾಟಕವು 'ಸರ್ವ ಜನಾಂಗದ ಶಾಂತಿಯ ತೋಟ'. ನಾವು ಅದರ ಅನುಸಾರವೇ ನಡೆದಿದ್ದೇವೆ. 'ಇವನಾರವ, ಇವನಾರವ ಎಂದೆನಿಸಬೇಡ, ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ...' ಎಂದು ಎಲ್ಲರನ್ನೂ ಒಳಗೊಂಡು ಮುನ್ನಡೆದ ಕಾರಣಕ್ಕೆ ಜನ ಕೈ ಹಿಡಿದಿದ್ದಾರೆ ಎಂದು ವಿವರಿಸಿದರು.

ಕಾಂಗ್ರೆಸ್ ಮುಕ್ತ ಕರ್ನಾಟಕ ಮಾಡುತ್ತೇವೆ, ಮುಂದಿನ ವಿಧಾನಸಭಾ ಚುನಾವಣೆಗಳಲ್ಲಿ 150 ಕ್ಷೇತ್ರಗಳನ್ನು ಗೆಲ್ಲುತ್ತೇವೆ ಇದುವೇ 'ಮಿಶನ್ – 150' ಎಂದೆಲ್ಲ ಯಡಿಯೂರಪ್ಪ ಹೇಳಿದ್ದರು. ಮುಂದಿನ ಬಾರಿ ಈ ನಿಮ್ಮ ಯಡಿಯೂರಪ್ಪ ಮುಖ್ಯಮಂತ್ರಿ ಆಗಬೇಕು ಎನ್ನುವುದಾದರೆ ಬಿಜೆಪಿಗೆ ಮತನೀಡಿ ಎಂದು ಅವರು ಚುನಾವಣೆ ವೇಳೆ ಎಲ್ಲೆಡೆ ಕೇಳುತ್ತಿದ್ದರು. ಮತದಾರರ ಬಗ್ಗೆ ಅಸೂಕ್ಷ್ಮತೆ ಪ್ರದರ್ಶಿಸುವ ಇಂಥ ನಡೆಗಳನ್ನು ಜನತೆ ಒಪ್ಪಲಿಲ್ಲ. ಫಲಿತಾಂಶದ ಮೂಲಕ ಅವರು ಉತ್ತರ ಕೊಟ್ಟರು. ಈಗ ಯಡಿಯೂರಪ್ಪನವರಿಗೆ ಭ್ರಮನಿರಸನವಾಗಿದೆ

ಎಂದು ವಿಶ್ಲೇಷಿಸಿದರು. ಅಧಿಕಾರ ದುರುಪಯೋಗ, ಹಣ ಹಂಚಿಕೆಯ ಬಗ್ಗೆ ಇಂದು ಮಾತನಾಡುತ್ತಿರುವ ಯಡಿಯೂರಪ್ಪನವರು ತಾವು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ 'ಆಪರೇಷನ್ ಕಮಲ'ದ ಮೂಲಕ ಸಾಲುಸಾಲು ಉಪಚುನಾವಣೆ ನಡೆಸಿದರು. ಆ ಮೂಲಕ ಭ್ರಷ್ಟಾಚಾರ ವ್ಯಾಪಕವಾಗಲು ಕಾರಣರಾದರು ಎಂದು ಪ್ರತಿಕ್ರಿಯಿಸಿದರು.

ಅಂತಿಮವಾಗಿ ಜೆಡಿಎಸ್ ನ ವರಿಷ್ಠರಾದ ಎಚ್.ಡಿ. ದೇವೇಗೌಡ ಹಾಗೂ ರಾಜ್ಯಾಧ್ಯಕ್ಷ ಕುಮಾರಸ್ವಾಮಿಯವರಿಗೆ, ಜೆಡಿಎಸ್‌ನ ಸ್ಥಳೀಯ ಘಟಕದ ಮುಖ್ಯಸ್ಥರು, ಕಾರ್ಯಕರ್ತರಿಗೂ ಮುಖ್ಯಮಂತ್ರಿಯವರು ಧನ್ಯವಾದಗಳನ್ನು ಅರ್ಪಿಸಿದರು.

-----------------